ಹೋಟೆಲ್‌ನ ಮೂರನೆಯ ಮಹಡಿಯ ಸೂಪರ್ ಲಕ್ಸುರಿ ರೂಮಿನಲ್ಲಿ ವಿಸ್ಕಿ ಕುಡಿಯುತ್ತಾ ಕುಳಿತಿದ್ದೆ. ಜಾಸ್ಮಿನ್ ನಲವತ್ತು ವರ್ಷದ ಅದ್ಭುತ ಪರ್ಸನಾಲಿಟಿಯ ಮಹಿಳೆ. ಅಂದಿಗೆ ಫಾರ್ಮಸ್ಯುಟಿಕಲ್ ಫ್ಯಾಕ್ಟರಿ ಪ್ರಾರಂಭವಾಗಿ ಕರೆಕ್ಟಾಗಿ ಆರು ತಿಂಗಳಾಗಿತ್ತು. ಅದರ ಖುಷಿಯನ್ನು ಆಚರಿಸಲು ನಾವಿಬ್ಬರೂ ಸೇರಿದ್ದೆವು. ಧಾರಾವಿ ಸ್ಲಂನ ಡಿಸ್ಟ್ರಿಬ್ಯೂಷನ್ ಪಡೆದು ವಾರ ಪೂರ್ತಿ ಸ್ಲಂನಲ್ಲಿ ತಿರುಗಾಡಿ ಟ್ಯಾಬ್ಲೆಟ್ ಮಾರುಕಟ್ಟೆಗೆ ಭದ್ರವಾದ ಬುನಾದಿ ಹಾಕಿದವಳೇ ಈ ಜಾಸ್ಮಿನ್ ಫರ್ನಾಂಡಿಸ್. ಜಾಸ್ಮಿನ್ ಸ್ಲಂನಲ್ಲಿ ಹುಟ್ಟಿ ಬೆಳೆದವಳು. ಸಮಾಜಶಾಸ್ತ್ರದಲ್ಲಿ ಎಂ.ಎ. ಮಾಡಿ, ಒಂದು ಸಣ್ಣ ಸಂಸ್ಥೆಯನ್ನು ಹುಟ್ಟಿ ಹಾಕಿ ಈಗ ದೊಡ್ಡ ಹೆಸರನ್ನು ಮಾಡಿದವಳು. ಕಾರ್ಪೊರೇಷನ್, ಪೊಲೀಸ್ ಇಲಾಖೆಗಳಲ್ಲಿ ಒಳ್ಳೆ **idendity**ಯನ್ನು ಗಳಿಸಿರುವಳಲ್ಲದೆ ರಾಜಕೀಯ ಮತ್ತು ಸಿನಿಮಾ ಕ್ಷೇತ್ರದ ಗಣ್ಯರ ನಂಟನ್ನು ಇರಿಸಿಕೊಂಡಿದ್ದಾಳೆ. ನನಗೆ ಧಾರಾವಿ ಸ್ಲಂನ ಇಂಚು ಇಂಚನ್ನೂ ಪರಿಚಯಿಸಿದ್ದಳು. ನಮ್ಮ ಫಾರ್ಮಸ್ಯುಟಿಕಲ್ ಡಿಸ್ಟ್ರಿಬ್ಯೂಶನ್ ಪಡೆದುಕೊಂಡ ನಂತರ ಬಾಂದ್ರಾದಲ್ಲಿ ಎರಡು ಫ್ಲ್ಯಾಟ್‌ಗಳನ್ನು ಖರೀದಿಸಿದ್ದಾಳೆ. ಸ್ಲಂನ ಟ್ರಾವೆಲ್ ಏಜೆನ್ಸಿಯೊಂದನ್ನು ಕೂಡ ಖರೀಸಿದ್ದಾಳೆ. ಸ್ಲಂ ಜನರ ಹಕ್ಕುಗಳಿಗಾಗಿ ದೊಡ್ಡ ದೊಡ್ಡ ಹೋರಾಟಗಳನ್ನು ಸಂಘಟಿಸ ತೊಡಗಿದ್ದಾಳೆ. ಒಳ್ಳೆಯ ದೇಹಸಿರಿಯನ್ನು ಕಾಪಾಡಿಕೊಂಡು ಬಂದಿದ್ದಾಳೆ. ವ್ಯಾಪಾರ ಕಾರಣದಿಂದ ನಮ್ಮಿಬ್ಬರಲ್ಲಿ ತುಂಬಾ ಸಲುಗೆ ಬೆಳೆದು ಬಿಟ್ಟಿದೆ. ಡಿಸ್ಟ್ರಿಬ್ಯೂಶನ್‌ನ ಸಿಲ್ವರ್ ಜುಬಿಲಿಯನ್ನು ನನ್ನೊಂದಿಗೆ ಆಚರಿಸಲು ಬಂದಿದ್ದಳು. ರಾತ್ರಿ ಹತ್ತು ಗಂಟೆಯಾಗಿತ್ತು. ಅರ್ಧ ಗಂಟೆಯ ಹಿಂದೆಯೇ ಇಬ್ಬರೂ ಒಂದೊಂದು ಟ್ಯಾಬ್ಲೆಟ್ ತೆಗೆದುಕೊಂಡಿದ್ದೆವು. ಜಾಸ್ಮಿನ್ ವಿವಸ್ತ್ರಳಾಗಿ ನನ್ನನ್ನೂ ವಿವಸ್ತ್ರಗೊಳಿಸತೊಡಗಿದ್ದಳು. ನಮ್ಮ ದೇಹಗಳು ಒಂದನ್ನೊಂದು ಭಕ್ಷಿಸಲು ಸಿದ್ಧವಾಗ ತೊಡಗಿದ್ದವು.

ಇನ್ನೇನು ಟಿ.ವಿ.ಯನ್ನು ಆಫ್ ಮಾಡಬೇಕೆನ್ನುವಷ್ಟರಲ್ಲಿ ರಾಷ್ಟ್ರೀಯ ಚಾನೆಲ್‌ನಲ್ಲಿ ಬ್ರೇಕಿಂಗ್ ನ್ಯೂಸೊಂದು ಬಿತ್ತರವಾಗ ತೊಡಗಿತು. ಟಿ.ವಿ. ಪರದೆಯ ಮೇಲೆ ಮೂಡುತ್ತಿದ್ದ ಅಕ್ಷರಗಳು, ದೃಶ್ಯಗಳು ನನ್ನ ಕಣ್ಣುಗಳನ್ನು ತುಂಬಿಕೊಳ್ಳತೊಡಗಿದವು.

ಆಂಧ್ರದ ಭತ್ತದ ಕಣಜವೆಂದು ಕರೆಸಿಕೊಳ್ಳುವ ಜಿಲ್ಲೆಯಲ್ಲಿ ಆರ್ಗನಿಕ್ ಗೊಬ್ಬರದ ಹೆಸರಿನಲ್ಲಿ ಮಹಾಮೋಸ. ಗೊಬ್ಬರವನ್ನು ಖರೀದಿಸಿ ಮೋಸ ಹೋದ ಸಾವಿರಾರು ರೈತರು. ಲಕ್ಷಾಂತರ ಎಕರೆಗಳಲ್ಲಿ ಭತ್ತದ ಪೈರು ಹುಲುಸಾಗಿ ಬೆಳೆದಿದ್ದರೂ ಭತ್ತದ ತೆನೆಗಳು ಮಾತ್ರ ಸಂಪೂರ್ಣ ಜೊಳ್ಳು. ಜೊಳ್ಳು ಬಿದ್ದ ಭತ್ತದ ಗದ್ದೆಗಳಿಗೆ ಬೆಂಕಿಯಿಟ್ಟು ಸುಡುತ್ತಿರುವ ರೈತರು. ಇದರಿಂದಾಗಿ ಹತ್ತು ಜನ ರೈತರು ತಮ್ಮ ಗದ್ದೆಗಳಲ್ಲಿಯೇ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವ ದೃಶ್ಯಗಳು. ಆರ್ಗನಿಕ್ ಫರ್ಟಿಲೈಸರ್ ಕಾರ್ಖಾನೆಯ ಮಾಲೀಕರು ಕೂಡ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿಯೊಂದಿಗೆ ಗೊಬ್ಬರದ ಚೀಲಗಳನ್ನು ಪೇರಿಸಿರುವ ಕೊಠಡಿಯಲ್ಲಿ ಫ್ಯಾನಿಗೆ ನೀಲಾಂಜನ ನೇಣು ಹಾಕಿಕೊಂಡಿರುವ ದೃಶ್ಯ. ನೀಲಾಂಜನಾಳೊಂದಿಗೆ ಕೇಂದ್ರ ಕೈಗಾರಿಕಾ ಮಂತ್ರಿಗೆ ಅನೈತಿಕ ಸಂಬಂಧ ಇದೆಯೆಂಬ ಬ್ರೇಕಿಂಗ್ ನ್ಯೂಸ್. ಆತ್ಮಹತ್ಯೆ ಮಾಡಿಕೊಂಡಿರುವ ನೀಲಾಂಜನ ಈಗ ಆರು ತಿಂಗಳ ಗರ್ಭಿಣಿ. ಆರ್ಗನಿಕ್ ಗೊಬ್ಬರದ ಬಳಕೆಯಿಂದ ಉತ್ಪತ್ತಿಯಾದ ಕೀಟಗಳು ಭತ್ತದ ತೆನೆಗಳ ಹಾಲನ್ನು ಸಂಪೂರ್ಣವಾಗಿ ಹೀರಿರುವುದೇ ಭತ್ತ ಜೊಳ್ಳಾಗಲು ಕಾರಣವೆಂದು ಹೇಳುತ್ತಿರುವ ಕೃಷಿ ವಿಜ್ಞಾನಿಗಳು. ಕೇಂದ್ರ ಕೈಗಾರಿಕಾ ಮಂತ್ರಿ ಕೂಡಲೇ ರಾಜೀನಾಮೆ ನೀಡಬೇಕೆಂದು ಒತ್ತಾಯಿಸುತ್ತಿರುವ ವಿರೋಧ